ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

18

ಇಲಾಖೆ / ವಿಷಯ : DEPARTMENT / SUBJECT: ವಿಧಾನ ಸಭೆ ಅಧಿವೇಶನ

ಪತ್ರಿಕೆಯ ಹೆಸರು : NAME OF THE NEWS PAPER: ವಿಶ್ವವಾಣಿ    ದಿನಾಂಕ : DATE : 23/3/2021

### ನ್ಯಾಯಮೂರ್ತಿಗಳ ಸಮ್ಮುಖದಲ್ಲಿ ತನಿಖೆಗೆ ಆಗ್ರಹ

# ಸದನದಲ್ಲಿ ಸಿಡಿದ ಸಿದ್ದು

23/3/21

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು

'ಸಿಡಿ ಬಿಡುಗಡೆಯ ಭಯದಿಂದ ನ್ಯಾಯಾಲಯದ ಮೋರೆ ಹೋದ ಸಚಿವರು, ಜನರಿಗೆ ರಕ್ಷಣೆ ನೀಡಲು ಯೋಗ್ಯರಲ್ಲ. ಹೀಗಾಗಿ, ಅವರು ಮೊದಲು ರಾಜೀನಾಮೆ ನೀಡಿ ಹೊರಬರಬೇಕು' ಎಂದು ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಒತ್ತಾಯಿಸಿದರು.

ವಿಧಾನಸಭೆಯಲ್ಲಿ ನಿಲುವಳಿ ಸೂಚನೆ ಮಂಡಿಸಿ ಮಾತನಾಡಿದ ಅವರು, 'ರಮೇಶ್ ಜಾರಕಿಹೊಳಿ ವಿರುದ್ಧ ರಾಸಲೀಲೆಯಲ್ಲಿ ಭಾಗವಹಿಸಿದ ಆರೋಪ ಬಂದಿದೆ. ಹೀಗಾಗಿ, ಅವರು ರಾಜೀನಾಮೆ ನೀಡಿದ್ದಾರೆ. ಈ ಪ್ರಕರಣ ಬೆಳಕಿಗೆ ಬರುತ್ತಿದ್ದಂತೆ ಉಳಿದ ಆರು ಸಚಿವರು ನ್ಯಾಯಾಲಯದಿಂದ ತಡೆಯಾಜ್ಞೆ ತಂದಿದ್ದಾರೆ. ಸಚಿವರಾಗಿ ಇರುವವರು ತಮ್ಮನ್ನೇ ತಾವು ರಕ್ಷಣೆ ಮಾಡಿಕೊಳ್ಳಲಾಗದೆ ನ್ಯಾಯಾಲಯದ ಮೊರೆ ಹೋಗುವುದಾದರೆ, ಅವರಿಗೆ ಜನರಿಗೆ ರಕ್ಷಣೆ ಒದಗಿಸುವ ನೈತಿಕತೆ ಎಲ್ಲಿದೆ?' ಎಂದು ಪ್ರಶ್ನಿಸಿದರು.

'6 ಸಚಿವರು ಕುಂಬಳಕಾಯಿ ಕಳ್ಳ ಎನ್ನುತ್ತಿದ್ದಂತೆ ಹೆಗಲು ಮುಟ್ಟಿ ನೋಡಿಕೊಳ್ಳುವ ಕೆಲಸ ಮಾಡಿದ್ದಾರೆ. ಪ್ರಕರಣ ಬೆಳಕಿಗೆ ಬರುತ್ತಿದ್ದಂತೆ ಈ ಆರು ಸಚಿವರು ಮಾತ್ರವೇ ಏಕೆ ನ್ಯಾಯಾಲಯಕ್ಕೆ ಹೋದರು. ಉಳಿದವರು ಏಕೆ ನ್ಯಾಯಾಲಯದ ಮೊರೆ ಹೋಗಲಿಲ್ಲ. ಮುಂಬೈಗೆ ಹೋಗಿದ್ದ ತಂಡಕ್ಕೆ ಮಾತ್ರ ಏಕೆ ಈ ಭಯ, ಸಿಡಿ ಬಿಡುಗಡೆ ಮಾಡಿ ತೇಜೋವಧೆ ಮಾಡುತ್ತಾರೆ ಎಂದು ಭಯಪಡುವ ಸಚಿವರು, ಈ ಬಗ್ಗೆ ಸೂಕ್ತ ತನಿಖೆ ನಡೆಸಿ ಷಡ್ಯಂತ್ರ ರೂಪಿಸುವವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಸರಕಾರಕ್ಕೆ ಒತ್ತಾಯಿಸಬಹುದಿತ್ತಲ್ಲವೇ?' ಎಂದರು.



**ಸಿಡಿ ಪ್ರಕರಣದ ತನಿಖೆಯನ್ನುಎಸ್‌ಐಟಿ ಸಮರ್ಥವಾಗಿ ನಿಭಾಯಿಸುತ್ತಿದೆ. ಯುವತಿಯ ಮನವಿಯನ್ನು ಪುರಸ್ಕರಿಸಿದ್ದು, ಆಕೆಗೆ ರಕ್ಷಣೆ ಕೊಡುವ ನಿಟ್ಟಿನಲ್ಲಿ ಎಲ್ಲ ಪ್ರಯತ್ನವನ್ನು ಇಲಾಖೆ ಮಾಡುತ್ತಿದೆ. ಆಕೆ ಇರುವಲ್ಲಿಗೆ ತೆರಳಿ ಆಕೆಯ ಹೇಳಿಕೆ ದಾಖಲಿಸಿ ಕೊಳ್ಳುವ ಪ್ರಯತ್ನ ಮಾಡಲಾಗುತ್ತಿದೆ.**

**– ಬಸವರಾಜ ಬೊಮ್ಮಾಯಿ** ಗೃಹ ಸಚಿವ



## ರಮೇಶ್ ಜಾರಕಿಹೊಳಿ ವಿರುದ್ಧ ಎಫ್‌ಐಆರ್ ಇಲ್ಲ

**'ದೂರು ನೀಡಿ ನಾಲ್ಕೈದು ದಿನ ಕಳೆದರೂ ರಮೇಶ್ ಜಾರಕಿಹೊಳಿ ಸಿಡಿ ಪ್ರಕರಣದಲ್ಲಿ ಪೊಲೀಸರು ಎಫ್‌ಐಆರ್ ದಾಖಲು ಮಾಡುವುದಿಲ್ಲ. ದೂರುದಾರ ತನ್ನ ದೂರನ್ನು ವಾಪಸ್ ಪಡೆಯುತ್ತಾನೆ. ಆದರೆ, ಏಳು ದಿನಗಳ ನಂತರ ರಮೇಶ್ ಜಾರಕಿಹೊಳಿ ನೀಡುವ ದೂರನ್ನು ಆಧರಿಸಿ ಎಫ್‌ಐಆರ್ ದಾಖಲಾಗುತ್ತದೆ. ಅವರ ಒಂದೇ ಪತ್ರಕ್ಕೆ ನೀವು ಎಸ್‌ಐಟಿ ತನಿಖೆಗೆ ಒಪ್ಪಿಸುತ್ತೀರಿ, ಆದರೆ, ಮಹಿಳೆ ತನಗೆ ರಕ್ಷಣೆ ನೀಡುವಂತೆ ಕೇಳಿಕೊಂಡರೆ ಆ ಬಗ್ಗೆ ಈವರೆಗೆ ಕ್ರಮ ತೆಗೆದುಕೊಂಡಿಲ್ಲ. ಆಕೆ ಯಾರು? ಏನು? ಎತ್ತ ಎಂಬ ಬಗ್ಗೆ ಈವರೆಗೆ ರಾಜ್ಯದ ಜನರಿಗೆ ಮಾಹಿತಿ ಇಲ್ಲ. ಏಕೆಯೋ ತನಗೆ ಕೆಲಸ ಕೊಡಿಸುವ ನೆಪದಲ್ಲಿ ದುರುಪಯೋಗ ಮಾಡಿಕೊಂಡಿದ್ದಾರೆ ಎಂದು ಆರೋಪ ಮಾಡಿದ್ದಾಳೆ. ಆದರ ವಿರುದ್ಧ ಯಾವುದೇ ಕ್ರಮ ತೆಗೆದುಕೊಂಡಿಲ್ಲ' ಎಂದು ಸಿದ್ದರಾಮಯ್ಯ ಸರಕಾರವನ್ನು ತರಾಟೆಗೆ ತೆಗೆದುಕೊಂಡರು.**